ಶ್ರೀ ಎನ್. ಧರ್ಮಸಿಂಗ್: ಪಾಪ, ಅವರಿಗೇಕೆ ತೊಂದರೆ ಕೊಡುತ್ತೀರಿ? ನಾವು ಪ್ರಸ್ತಾಪ ಮಾಡಿದ ವಿಷಯಕ್ಕೆ ಉತ್ತರವೇ ಬಂದಿಲ್ಲ. ಬೇರೆ ಉತ್ತರವನ್ನು ಬರೆದುಕೊಟ್ಟರೆ ಅವರು ಹೇಳುತ್ತಾರೆ.

ಅಧ್ಯಕ್ಷರು: ಅವರು ಭ್ರೂಣ ಹತ್ಯೆ ಬಗ್ಗೆ ಉತ್ತರ ಕೊಡುತ್ತಿದ್ದಾರೆ. ನೀವು ಪ್ರಸ್ತಾಪಿಸಿದ ವಿಷಯದ ಬಗ್ಗೆ ಮುಖ್ಯಮಂತ್ರಿಯವರೇ ಉತ್ತರ ಕೊಡುತ್ತಾರೆ.

6 ಮಂತ್ರಿಗಳ ಹೇಳಿಕೆ.

ವಿಷಯ: ಬೆಂಗಳೂರಿನ ಜಕ್ಕರಾಯನ ಕೆರೆ ಸಮೀಪದ ಕಸದ ರಾಶಿಯ ಬಳಿ ಭ್ರೂಣಗಳು ಸಿಕ್ಕಿರುವ ಕುರಿತು

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿ:05-08-2007 ರಂದು ಬೆಂಗಳೂರು ನಗರದ ಶ್ರೀರಾಂಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ಜಕ್ಕರಾಯನ ಕೆರೆ ದಂಡೆ ಹತ್ತಿರ ಏಳು ಭ್ರೂಣಗಳು ಮತ್ತು ಇತರೆ ಜೈವಿಕ ವೈದ್ಯಕೀಯ ತಾಜ್ಯ ವಸ್ತುಗಳನ್ನು ಪೊಲೀಸಿನವರು ವಶಪಡಿಸಿಕೊಂಡಿರುತ್ತಾರೆ. ವಶಪಡಿಸಿಕೊಳ್ಳಲಾದ ಭ್ರೂಣಗಳನ್ನು ಶವ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಳಪಡಿಸಲಾಗಿದ್ದು ಸದರಿ ಪರೀಕ್ಷೆಯಿಂದ ಈ ಕೆಳಕಂಡ ಅಂಶಗಳು ಬೆಳಕಿಗೆ ಬಂದಿರುತ್ತವೆ.

1) ಏಳು ಭ್ರೂಣಗಳ ಪೈಕಿ ಐದು ಗಂಡು ಭ್ರೂಣಗಳು ಹಾಗೂ ಎರಡು ಹೆಣ್ಣು ಭ್ರೂಣಗಳು ಇರುತ್ತವೆ.

2) ಈ ಭ್ರೂಣಗಳು ಅತ್ಯಂತ ಪ್ರತ್ಯೇಕವಾಗಿ ಫಾರ್ಮಾಲಿನ್ ದ್ರವ ಇದ್ದ ಶೀಶೆಗಳಲ್ಲಿ ಸಂರಕ್ಷಿಸಿದ್ದ ಭ್ರೂಣಗಳಾಗಿರುತ್ತವೆ.

3) ಈ ಭ್ರೂಣಗಳ ಅಂಗ ನ್ಯೂನ್ಯತೆಗಳಿಂದ ಕೂಡಿದ್ದು ಇವುಗಳನ್ನು ವೈದ್ಯಕೀಯ ಕಾಲೇಜು ಅಥವಾ ನರ್ಸಿಂಗ್ ಕಾಲೇಜಿನ ವಸ್ತು ಸಂಗ್ರಹಾಲಯದಲ್ಲಿ ಶಿಕ್ಷಣದ ಉದ್ದೇಶಕ್ಕಾಗಿ ಸಂಗ್ರಹಿಸಿ ಉಪಯೋಗಿಸುತ್ತಿದ್ದ ಸಾಧ್ಯತೆಗಳಿರುತ್ತವೆ.

ಈ ಪ್ರಕರಣದ ಬಗ್ಗೆ ಪೊಲೀಸ್ ವಿಚಾರಣೆ ಮುಂದುವರೆದಿದೆ. ಪೊಲೀಸ್ ತನಿಖೆಯನ್ನು ತೀವ್ರಗೊಳಿಸಿ ಅಪರಾಧವೆಸಗಿರುವವರನ್ನು ಕಂಡು ಹಿಡಿಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚನೆಗಳನ್ನು ನೀಡಲಾಗಿದೆ. ಈ ಭ್ರೂಣಗಳ ಜೊತೆ ಉಪಯೋಗಿಸಿ ಬಿಸಾಡಿರುವ ಔಷಧಿಗಳ ಖಾಲಿ ಶೀಶೆಗಳನ್ನು (ಬ್ಯಾಚ್ ನಂಬರ್, ಕಂಪನಿ ಹೆಸರು, ವಿತರಣೆಯಾಗಿರುವ

ಕೊನೆಯ ಹಂತದವರೆಗೆ ತಿಳಿಯಲು) ತನಿಖೆ ಮಾಡಲಾಗುತ್ತಿದೆ. ಬಯೋಮೆಡಿಕಲ್ ವೇಸ್ಟ್‌ನ್ನು ಗುತ್ತಿಗೆದಾರರು ಕಡ್ಡಾಯವಾಗಿ The Environment Protection Act 1986 ರ ಪ್ರಕಾರ ವಿಲೇವಾರಿ ಮಾಡಬೇಕು. ರಾಜ್ಯದಲ್ಲಿರುವ ಎಲ್ಲಾ ವೈದ್ಯಕೀಯ ಸಂಸ್ಥೆಗಳು (ಕ್ಲಿನಿಕ್, ನರ್ಸಿಂಗ್ ಹೋಂ, ಆಸ್ಪತ್ರೆಗಳು, ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಿರುವ ಆಸ್ಪತ್ರೆಗಳು) ಹೊರಹಾಕುತ್ತಿರುವ ಬಯೋಮೆಡಿಕಲ್ ವೇಸ್ಟನ್ನು ಕಡ್ಡಾಯವಾಗಿ ಬಯೋಮೆಡಿಕಲ್ ವೇಸ್ಟ್ ತೆಗೆದುಕೊಳ್ಳುತ್ತಿರುವ ಗುತ್ತಿಗೆದಾರರ ಹತ್ತಿರ Tie-up ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳಬೇಕು. ಒಟ್ಟಾರೆ ಈ ಪ್ರಕರಣ ಕಾನೂನು ಬಾಹಿರ ಜೈವಿಕ ವೈದ್ಯಕೀಯ ತ್ಯಾಜ್ಯವಸ್ತು ವಿಲೇವಾರಿ ಪ್ರಕರಣವಾಗಿದ್ದು ಅಪರಾಧ ಎಸಗಿರುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ..ವಿ. ಶ್ರೀರಾಮರೆಡ್ಡಿ: ಈ ಎಲ್ಲ ವಿವರಗಳೂ ಪತ್ರಿಕೆಯಲ್ಲಿ ಬಂದಿವೆ. ಅದನ್ನೇ ಮಂತ್ರಿಗಳು ಇಲ್ಲಿ ಓದುತ್ತಿದ್ದಾರೆ. ನಾವು ಸ್ಪಷ್ಟವಾಗಿ ಕೇಳಿದ್ದೇವೆ. ಇದರ ಹಿಂದೆ ಒಂದು ವ್ಯವಸ್ಥಿತವಾದ ಜಾಲವಿದೆ. ಇದನ್ನು ಸುಮ್ಮನೆ ಹೇಳುವ ರೀತಿಯಲ್ಲಿ, ಒಂದು ಅರ್ಥದಲ್ಲಿ ನೀವು ಹೇಗೆ ಹೇಳಿದ್ದೀರೆಂದರೆ, ಅಂಗವಿಕಲತೆಯನ್ನು ಹೊಂದಿರುವ ಭ್ರೂಣಗಳೆಂದು ಅವರು ಹೇಳುತ್ತಿದ್ದಾರೆಂದು ನೀವು ಹೇಳುತ್ತಿದ್ದೀರಿ. ಅಂಗವಿಕಲತೆ ಹೊಂದಿದ ಕಾರಣಕ್ಕೆ ಅವುಗಳನ್ನು ಬಿಸಾಡಬಹುದೆಂದು ಹೇಳುವುದು ಅದನ್ನು indirect ಆಗಿ ಒಪ್ಪಿಕೊಂಡ ಹಾಗೆ ಇದೆ. ಮತ್ತೆ, ಈ ರೀತಿ ಆಗಲಿಕ್ಕೆ ಕಾರಣವೇನು ಎಂಬ ಬಗ್ಗೆ ಸರ್ಕಾರದಿಂದ ಏನೂ ಉತ್ತರವಿಲ್ಲ. ಪತ್ರಿಕೆಯಲ್ಲಿ ಬಂದಿದ್ದನ್ನು ನೀವು ಓದುತ್ತಿದ್ದೀರಿ. ನಿಮ್ಮ ತನಿಖೆ ಏನಾಗಿದೆ?

ಅಧ್ಯಕ್ಷರು: ತನಿಖೆ ಮುಂದುವರಿಯುತ್ತಿದೆ ಎಂದು ಹೇಳಿದ್ದಾರಲ್ಲ.

ಶ್ರೀ ಆರ್. ಅಶೋಕ್: ಈ ಘಟನೆ ನಡೆದ ತಕ್ಷಣವೇ ಪೊಲೀಸರ ಹತ್ತಿರ ಹೋಗಿ ಮಾತನಾಡಿ ಇದನ್ನೆಲ್ಲ ತೆಗೆದುಕೊಂಡು ಪರೀಕ್ಷೆಗೋಸ್ಕರ Victoria ಆಸ್ಪತ್ರೆಗೆ ಕಳುಹಿಸಿದ್ದೇನೆ. ಪರೀಕ್ಷೆಯಿಂದ ದೃಢಪಟ್ಟಿರುವುದೇನೆಂದರೆ, ಇದ್ಯಾವುದೂ fresh ಆಗಿ, ಹೊಸದಾಗಿ ಭ್ರೂಣ ಹತ್ಯೆಯಾಗಿರುವುದಲ್ಲ. ಪರೀಕ್ಷೆಗೋಸ್ಕರ ದ್ರಾವಣದಲ್ಲಿ ಹಾಕಿ glass ನಲ್ಲಿಟ್ಟಿರುವಂಥದ್ದು ಸ್ಥಳದಲ್ಲಿಯೇ ದೊರೆತಿದೆ. ಇದು ಯಾವುದೋ Medical Teaching college ಇರಬಹುದು ಅಥವಾ Medical Nursingನದ್ದು ಇರಬಹುದೆಂಬುದು ನಮ್ಮ suspicion. ಇದನ್ನು ಹಿಡಿಯುವುದಕ್ಕೆ ಬಹಳ easy ಯಾಗಿರುವುದೆಂದರೆ, ಅಲ್ಲಿ ಸಿಕ್ಕಿರುವ

medicine bottleಗಳೇನಿವೆ, ಅವುಗಳ ಬ್ಯಾಚ್ ನಂಬರ್ಸ್ ಇವೆ. ಆ ಬ್ಯಾಚ್ ನಂಬರ್, ಡೇಟ್ ಅವೆಲ್ಲ ತೆಗೆದುಕೊಂಡರೆ, immediate ಆಗಿ ಎಲ್ಲಿ ಸೇಲ್ ಆಗಿದೆ, ಯಾವ ಆಸ್ಪತ್ರೆಗೆ ಹೋಗಿದೆ ಎಂಬುದನ್ನೆಲ್ಲ clean ಆಗಿ ಕಂಡುಹಿಡಿಯಬಹುದು. ನಿನ್ನೆ ನಾನು ಒಂದು ಉನ್ನತ ಮಟ್ಟದ ಸಭೆಯನ್ನು ನಮ್ಮ office ನಲ್ಲಿ ಕರೆದಿದ್ದೆ. ಅದರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರೂ ಭಾಗವಹಿಸಿದ್ದರು, ಅದರಲ್ಲಿ ಎಲ್ಲ Principal Secretaries, Corporation, Police and Environment Department ನವರೂ ಭಾಗವಹಿಸಿದ್ದರು. Environment Protection Act, 1986 ಪ್ರಕಾರ ಅವರಿಗೆ 5 ವರ್ಷದವರೆಗೂ ಜೈಲು ಶಿಕ್ಷೆ ವಿಧಿಸಬಹುದು, ಒಂದು ಲಕ್ಷ ರೂಪಾಯಿ ಫೈನ್ ಹಾಕಬಹುದು. ಆ ಆ್ಯಕ್ಟ್ ಪ್ರಕಾರ ಇಷ್ಟು ಕಠಿಣವಾದ ಶಿಕ್ಷೆಯಿದೆ. ಅದಕ್ಕೋಸ್ಕರ Pollution Control Board ನವರನ್ನೂ ಆ ಸಭೆಗೆ ಕರೆಸಿದ್ದೆ. ಅವರಿಗೂ direction ಕೊಟ್ಟಿದ್ದೇನೆ. Environment Department ನವರ ಹತ್ತಿರ Agency ಇಲ್ಲ, ಬೆಂಗಳೂರು Corporationನ Health Officers ಗೆ direction ಕೊಟ್ಟಿದ್ದೇನೆ. Bio-medical waste dispose ಮಾಡುವುದಕ್ಕೆ 2 ಕಂಪನಿಗಳಿದ್ದು, ಆ ಕಂಪನಿಗಳ ಜೊತೆ tie up ಇರಬೇಕು. ಇನ್ನು ಮುಂದೆ, ಬೆಂಗಳೂರಿನಲ್ಲಿರುವ ಎಲ್ಲ Nursing College, Nursing Homes ಇರಬಹುದು, ಇವರೆಲ್ಲರೂ tie up ಆಗಬೇಕು. ಯಾರು tie up ಮಾಡಿಕೊಂಡಿಲ್ಲವೋ, ಅವರ ಮೇಲೆ immediate ಆಗಿ ನೀವು ಕ್ರಮ ತೆಗೆದುಕೊಳ್ಳಬೇಕು, ಆ ತರಹದ್ದನ್ನು seize ಮಾಡಬೇಕು ಎಂದು ಹೇಳಿದ್ದೇವೆ. ಇದೊಂದು ದೊಡ್ಡ ಅಪರಾಧ. ತಾವು ಹೇಳಿದ ಹಾಗೆ ಈ ತರಹದ್ದು ಒಂದು ದಂಧೆ ಇದೆ. ಮನುಷ್ಯನಿಗೆ ಸಂಬಂಧಪಟ್ಟಂಥ tissues ಇರಬಹುದು, ಬೇರೆ ಬೇರೆ ಅಂಗಗಳನ್ನು ರಸ್ತೆಯಲ್ಲಿ ಬಿಸಾಕುವಂಥದ್ದು ಒಂದು ತರಹ ಅಮಾನವೀಯ ಕೃತ್ಯವಾಗುತ್ತದೆ. ಈ ಕೃತ್ಯಗಳನ್ನು ಯಾವುದೇ ಕಾರಣಕ್ಕೂ ಸರ್ಕಾರ ಕ್ಷಮಿಸುವುದಿಲ್ಲ. ನಾನು ನಮ್ಮ ಅಧಿಕಾರಿಗಳಿಗೆ ಈಗಾಗಲೇ ನರ್ದೇಶನ ನೀಡಿದ್ದೇನೆ. ಈ ತರಹದ ಘಟನೆಗಳು ನಡೆಯದ ಹಾಗೆ ಇನ್ನು ಮುಂದೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಇನ್ನು 10 ದಿನಗಳೊಳಗೆ ಯಾರು ಅಪರಾಧಿ ಎನ್ನುವುದನ್ನು ಕಂಡುಹಿಡಿಯುವ ಬಗ್ಗೆ ಪೊಲೀಸ್ ಇಲಾಖೆಯಿಂದ ಜಂಟಿ ಪೊಲೀಸ್ ಕಮೀಷನರ್‌ರವರೆ ಖುದ್ದಾಗಿ ಕೈಗೆತ್ತಿಕೊಂಡು ತನಿಖೆಯನ್ನು ಮಾಡುತ್ತಿದ್ದಾರೆ. ನಾವು ಶೀಘ್ರದಲ್ಲಿಯೇ ವ್ಯಕ್ತಿಗಳನ್ನು ಪತ್ತೆ ಹಚ್ಚುವಂಥ ಕೆಲಸವನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.